# ಗಣತಿ ಆಧಾರಿತ ರಾಜ್ಯ ಸಾಧನ ಸಮೀಕ್ಷೆ
# ಅಕ್ಟೋಬರ್-2017

# (CSAS)

## 7 ನೇ ತರಗತಿ

## ಕೋರ್ ವಿಷಯಗಳ ಮಾದರಿ ಪ್ರಶ್ನೆ ಪತ್ರಿಕೆ ನಮೂನೆ

**(ಕೇವಲ ಅಭ್ಯಾಸಕ್ಕಾಗಿ,ಬದಲಾವಣೆಗೆ ಒಳಪಟ್ಟಿದೆ)**


**ವಿನ್ಯಾಸ ಇಂದ**

**ಅಂಜು ಸಕಲೇಶಪುರ**

**ಸಿ.ಆರ್.ಪಿ ಬೆಳಗೋಡು**

**ಸಕಲೇಶಪುರ**

**ಭಾಗ್ಯಲಕ್ಷ್ಮೀ ಸಿ.ಎಸ್**

**ಸಹಶಿಕ್ಷಕರು ಅರಸೀಕೆರೆ**

**ಪ್ರಶ್ನೆಗಳ ತಯಾರಕರು**

**ಪಲ್ಲವಿ ಬಾಗೆ,ಸೀಮಾರಾಣಿ ಬೆಳಗೋಡು**

**ಸಹ ಶಿಕ್ಷಕರು**

**ಬೆಳಗೋಡು ಕ್ಲಸ್ಟರ್**


e-BRC SKP

# ಗಣತಿ ಆಧಾರಿತ ರಾಜ್ಯ ಸಾಧನ ಸಮೀಕ್ಷೆ ಅಕ್ಟೋಬರ್-2017

## ಮಾದರಿ ಪ್ರಶ್ನೆ ಪತ್ರಿಕೆ

**ತರಗತಿ: 7** **ವಿಷಯ: ಕೋರ್ ವಿಷಯಗಳು**

==========================================================================

**ವಿದ್ಯಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು:-**

1.ಪ್ರಶ್ನೆಗಳನ್ನು ನಿಧಾನವಾಗಿ ಓದಿ ಅರ್ಥೈಸಿಕೊಳ್ಳುವುದು.

2.ಪ್ರಶ್ನೆ ಪತ್ರಿಕೆಯ ವರ್ಷನ್ ಸಂಖ್ಯೆಯನ್ನು ಓ.ಎಂ.ಆರ್ ನಲ್ಲಿ ನಿಗಧಿಪಡಿಸಿದ ಸ್ಥಳದಲ್ಲಿ ಕಡ್ಡಾಯವಾಗಿ ಶೇಡ್ ಮಾಡುವುದು.

3.ಪ್ರತಿ ಪ್ರಶ್ನೆಗೆ A B C D ಎಂಬುದಾಗಿ 4 ಆಯ್ಕೆಯ ಉತ್ತರಗಳನ್ನು ನೀಡಲಾಗಿರುತ್ತದೆ.ಅವುಗಳಲ್ಲಿ ಸರಿಯಾದ ಒಂದು ಉತ್ತರಕ್ಕೆ ಮಾತ್ರ ಓ.ಎಂ.ಆರ್ ನಲ್ಲಿ ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಶೇಡ್ ಮಾಡುವುದು.

4.ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳಿಗೆ ಶೇಡ್ ಮಾಡಬಾರದು.

5. ಓ.ಎಂ.ಆರ್ ನಲ್ಲಿ ಯಾವುದೇ ಚಿತ್ತು,ಕಾಟುಗಳನ್ನು ಮಾಡಬಾರದು.ಹಾಗೂ ಹರಿಯದಂತೆ ಮಡಚದಂತೆ ಜಾಗ್ರತೆ ವಹಿಸುವುದು.

6. ಓ.ಎಂ.ಆರ್ ನಲ್ಲಿ ಸಂಬಂಧಿಸಿದ ಮಾಹಿತಿಗಳನ್ನು ತಪ್ಪದೇ ಭರ್ತಿಮಾಡುವುದು.

7.ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳು ಭರ್ತಿ ಮಾಡಿದ ಎಲ್ಲಾ ಮಾಹಿತಿಗಳನ್ನು ಧೃಡಪಡಿಸಿಕೊಂಡು ಸಹಿ ಮಾಡುವುದು.

8.ಸರಿಯಾದ ಉತ್ತರಕ್ಕೆ ಶೇಡ್ ಮಾಡುವ ವಿಧಾನ ಮಾದರಿ:- 


## ಗಣಿತ

==========================================================================

1. 2+(−7) = ___________________

A. 9

B. −5

C. +5

D. 3

2. 3 3/4 ಇದರ ವಿಷಮ ಭಿನ್ನರಾಶಿ ರೂಪ ____________

A. 15/4

B. 6/4

C. 9/4

D. 10/4

e-BRCSKP

3. ಬಿಟ್ಟ ಪದ ತುಂಬಿರಿ 15/20 = ☐ /4

A. 6

B. 7

C. 3

D. 5

4. 3.5 ÷ 7 ಇದರ ಸಂಕ್ಷಿಪ್ತ ರೂಪ_____________

A. 0.05

B. 0.55

C. 0.35

D. 0.5

5. $-21x^2y$ ನಲ್ಲಿ xy ನ ಸಹಪವರ್ತನ __________________

A. $-21y$

B. $-21x$

C. $-21$

D. $-21xy$

6. $3-p^2 + p^3$ ಈ ಬೀಜೋಕ್ತಿಯು __________ ಡಿಗ್ರಿಯಲ್ಲಿದೆ.

A. 2

B. 3

C. 1

D. 5

7. ರೇಖಾಗಣಿತದ ಅತ್ಯಂತ ಸರಳ ಆಕೃತಿ ______________

A. ರೇಖೆ

B. ಕೋನ

C. ಬಿಂದು

D. ಕಿರಣ

e-BRC SKP

8. $35^0$ ಕೋನದ ಪೂರಕ ಕೋನ _____________

A. $35^0$

B. $15^0$

C. $55^0$

D. $145^0$

9. ಯಾವುದೇ ಎರಡು ರೇಖೆಗಳು ಒಂದೇ ಸಮತಲದಲ್ಲಿದ್ದರೆ ಆ ರೇಖೆಗಳನ್ನು _______ ಎನ್ನುವರು.

A. ಪ್ರಚೇದಕ ರೇಖೆಗಳು

B. ಜೋಡಿ ರೇಖೆಗಳು

C. ಸಮನಾಂತರ ರೇಖೆಗಳು

D. ಲಂಬ ರೇಖೆಗಳು

10. ಈ ಕೆಳಗಿನ ಯಾವ ಮೂರು ಕೋನಗಳನ್ನು ಬಳಸಿ ತ್ರಿಭುಜ ರಚಿಸಬಹುದು ______________

A. $50^0,60^0,70^0$

B. $65^0,75^0,55^0$

C. $57^0,64^0,79^0$

D. $60^0,70^0,80^0$

11. ಒಂದು ವೃತ್ತಕ್ಕೆ ________ ಸಮಮಿತಿ ಅಕ್ಷಗಳಿರುತ್ತವೆ.

A. ನಾಲ್ಕು

B. ಎರಡು

C. ಸೊನ್ನೆ

D. ಅನೇಕ

12. 3/6 ಇದರ ಸಮಾನ ಭಿನ್ನರಾಶಿ _________________

A. 1/2

B. 3/4

C. 6/12

D. 9/5

e-BRC SKP

13. 23/20 ಈ ಭಾಗಲಬ್ಧ ಸಂಖ್ಯೆ ಆದರ್ಶರೂಪ ________________

A. 14/10

B. 7/5

C. 1/23

D. 20/28

14. 1 ಮೈಲಿಗೆ _____________ ಕಿ.ಮೀಗಳು.

A. 2 ಕಿ.ಮೀ

B. 1.6 ಕಿ.ಮೀ

C. 1 ಕಿ.ಮೀ

D. 1.5 ಕಿ.ಮೀ

15. 3ab ÷ c ಇದು ____________ ಪದವಾಗಿದೆ.

A. ದ್ವಿಪದ

B. ತ್ರಿಪದ

C. ಏಕಪದ

D. ಬಹುಪದ

16. ಒಂದು ಕೋನವನ್ನು ರಚಿಸಲು ಕನಿಷ್ಠ ____________ ಅಂಶಗಳು ಬೇಕು.

A. 6

B. 3

C. 4

D. 5

17. ತ್ರಿಭುಜದ ಬಾಹ್ಯಕೋನ $110^0$ ಆದರೆ ಅದರ ಪಾರ್ಶ್ವ ಅಂತರ್‌ಕೋನ _____

A. $90^0$

B. $250^0$

C. $70^0$

D. $80^0$

e-BRC SKP

18. ಆಯತದ ಭ್ರಮಣದ ಕೋನ____________

A. $90^0$

B. $120^0$

C. $60^0$

D. $72^0$

19. ಒಂದು ಡಬ್ಬಿಯಲ್ಲಿ 8//12 ಕೆ.ಜಿ ಸಕ್ಕರೆಯಿತ್ತು.ಅದರಲ್ಲಿ 3/8 ಕೆ.ಜಿ ಖರ್ಚಾದರೆ ,ಡಬ್ಬಿಯಲ್ಲಿ ಉಳಿದ ಸಕ್ಕರೆಯ ಪ್ರಮಾಣ ಎಷ್ಟು?

A. 2/9 ಕೆ.ಜಿ

B. 11/12 ಕೆ.ಜಿ

C. 7/24 ಕೆ.ಜಿ

D. 11/20 ಕೆ.ಜಿ

20. ಈ ಸಮಸ್ಯೆಯ ಸರಳರೂಪ______________

(4x+3y+5z) +(2x+5y-2z)+(3x-4y-z)

A. 9x+12y+8z

B. 9x+4y+2z

C. 4x+5y+z

D. 9x+8y-3z

21. △ABC ಯಲ್ಲಿ AB = 6 ಸೆ.ಮೀ BC = 8 ಸೆ.ಮೀ B ಕೋನ $90^0$ ಆದರೆ AC ಯನ್ನು ಕಂಡುಹಿಡಿಯಿರಿ.

A. 9 ಸೆ.ಮೀ

B. 2 ಸೆ.ಮೀ

C. 14 ಸೆ.ಮೀ

D. 10 ಸೆ.ಮೀ

22. ರಶ್ಮಿ ತನ್ನ ಬ್ಯಾಂಕ್ ಖಾತೆಯಲ್ಲಿ 12350 ರೂಗಳನ್ನು ಹೊಂದಿದ್ದಾಳೆ. ಅದರಿಂದ 3 ಸಲ 200 ರೂಗಳನ್ನು ಖಾತೆಯಂದ ತೆಗೆದರೆ ಅವಳ ಖಾತೆಯಲ್ಲಿ ಉಳಿದಿರುವ ಬಾಕಿ ಹಣ __________

A. 11750 ರೂ

B. 10100 ರೂ

e-BRC SKP

C. 10000 ರೂ

D. 17500 ರೂ

23. 3 1/2 − (2 3/4 + 1/2 ) ನ್ನು ಸಂಕ್ಷೇಪಿಸಿದಾಗ ____________

A. 3 1/2

B. 1/2

C. 3/4

D. 1/4

24. (2a + 5) (a−7) ನ್ನು ಗುಣಿಸಿದಾಗ ___________

A. $3a^2+a+12$

B. $2a^2-9a-35$

C. $2a^2+9a+35$

D. $2a^2+3a-12$

e-BRC SKP

# ವಿಜ್ಞಾನ

==================================================================

1. ಈ ಆಹಾರದ ಘಟಕಗಳು ತಾಪ ನಿಯಂತ್ರಕಗಳಾಗಿ ಕೆಲಸ ಮಾಡುತ್ತವೆ_________________

A.ಕಾರ್ಬೋಹೈಡ್ರೇಟ್‌ಗಳು

B.ಪ್ರೊಟೀನ್‌ಗಳು

C.ಕೊಬ್ಬುಗಳು

D.ನಾರು ಪದಾರ್ಥಗಳು

2. ನೈಜ ಕೋಶಕೇಂದ್ರವು ಈ ಜೀವಕೋಶದಲ್ಲಿ ಇರುತ್ತದೆ.

A.ಪ್ರೋಕ್ಯಾರಿಯೋಟಿಕ್ ಜೀವಕೋಶ

B.ಬ್ಯಾಕ್ಟೀರಿಯಾ ಜೀವಕೋಶ

C.ವೈರಸ್

D.ಯೂಕ್ಯಾರಿಯೋಟಿಕ್ ಜೀವಕೋಶ

3. ಘರ್ಷಣಾಬಲವು ಯಾವಾಗಲೂ ಚಲನೆಯ ____________ ದಿಕ್ಕಿನಲ್ಲಿ ವರ್ತಿಸುತ್ತದೆ

A.ವಿರುದ್ಧ

B.ನೇರ

C.ಎಡ

D.ಬಲ

4. ಪರಿಮಾಣ ಮತ್ತು ದಿಕ್ಕು ಎರಡನ್ನೂ ಹೊಂದಿರುವ ಭೌತಿಕ ಪರಿಮಾಣ.

A ಕಾಲ

B ವೇಗೋತ್ಕರ್ಷ

C.ಜವ

D.ಚಲಿಸಿದ ದೂರ

5. ಕಾಯದ ಪ್ರಚ್ಛನ್ನ ಶಕ್ತಿಯು ಇದರಿಂದ ಹೆಚ್ಚಾಗುತ್ತದೆ

A ಕಾಯದ ರಾಶಿ

B ಕಾಯದ ಎತ್ತರ

C.ಕಾಯದ ರಾಶಿ ಮತ್ತು ಎತ್ತರ

D.ಕಾಯದ ವೇಗ

e-BRC SKP

6. ಗುಂಪಿಗೆ ಸೇರದ ಪದವನ್ನು ಗುರ್ತಿಸಿ :

A .ಕಾರ್ಬನ್ ಡೈಆಕ್ಸೈಡ್

B .ಕಾರ್ಬನ್

C.ಹೈಡ್ರೋಜನ್

D.ಕಾರ್ಬನ್ ಮಾನಾಕ್ಸೈಡ್

7.ತಾಪದ ಅಂತಾರಾಷ್ಟ್ರೀಯ ಮಾನ ____________ .

A ಜೌಲ್

B ಸೆಲ್ಸಿಯಸ್

C.ಪ್ಯಾರನೀಟ್

D.ಕೆಲ್ವಿನ್

8. ಮಣ್ಣಿನಲ್ಲಿನ ಆಮ್ಲೀಯತೆಯನ್ನು ತಟಸ್ಥೀಕರಿಸಲು ರೈತರು ಬಳಸುವ ರಾಸಾಯನಿಕ

A ಕ್ಯಾಲ್ಸಿಯಮ್ ಆಕ್ಸೈಡ್

B ಕ್ಯಾಲ್ಸಿಯಮ್ ಹೈಡ್ರಾಕ್ಸೈಡ್

C.ಕ್ಯಾಲ್ಸಿಯಮ್ ಕಾರ್ಬೋನೇಟ್

D.ಕ್ಯಾಲ್ಸಿಯಮ್ ಕ್ಲೋರೈಡ್.

9. ಬೀಜಕೇಂದ್ರದಲ್ಲಿರುವ ಉಪ ಪರಮಾಣ್ವಕ ಕಣಗಳು

A ಇಲೆಕ್ಟ್ರಾನ್‌ಗಳು

B ಇಲೆಕ್ಟ್ರಾನ್‌ಗಳು ಮತ್ತು ನ್ಯೂಟ್ರಾನ್‌ಗಳು

C.ನ್ಯೂಟ್ರಾನ್‌ಗಳು ಮತ್ತು ಪ್ರೋಟಾನ್‌ಗಳು

D.ಪ್ರೋಟಾನ್‌ಗಳು ಮತ್ತು ಇಲೆಕ್ಟ್ರಾನ್‌ಗಳು

10. ಡ್ಯುಟೇರಿಯಮ್‌ನಲ್ಲಿರುವ ಪ್ರೋಟಾನ್‌ಗಳು, ನ್ಯೂಟ್ರಾನ್‌ಗಳು ಮತ್ತು ಇಲೆಕ್ಟ್ರಾನ್‌ಗಳ ಸಂಖ್ಯೆ

A. 1, 1, 1

B 1, 0, 2

C. 0, 1, 1

D. 1, 2, 3

e-BRC SKP

11. ಗುಂಪಿಗೆ ಸೇರದ ಪದವನ್ನು  ಗುರ್ತಿಸಿ :

A.ಹೈಡ್ರೋಜನ್,

B.ಹೀಲಿಯಮ್,

C.ಟ್ರೈಷಿಯಮ್,

D.ಡ್ಯುಟೇರಿಯಮ್

12. ಪ್ರಾಣಿಜನ್ಯ ಕಾರ್ಬೋಹೈಡ್ರೇಟ್‌ಗೆ ಒಂದು ಉದಾಹರಣೆ ____________

A.ಗ್ಲೋಕೋಸ್

B.ಸೆಲ್ಯೂಲೋಸ್

C.ಗ್ಲೈಕೋಜನ್

D.ಪೆಕ್ಟಿನ್

13. ಜೀವಕೋಶದ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುವ ಮತ್ತು ಸಂಯೋಜಿಸುವ ಭಾಗ ______________

A.ಮೈಟೋಕಾಂಡ್ರಿಯಾ

B.ಕೋಶಕೇಂದ್ರ

C.ರೈಬೋಸೋಂ

D.ಗಾಲ್ಗಿ ಸಂಕೀರ್ಣ

14. ಕಾಯದ ಈ ಸ್ಥಿತಿಯಲ್ಲಿ ಕೆಲಸ ನಡೆದಿದೆ ಎನ್ನಬಹುದು_______

A.ವಿಶ್ರಾಂತ ಸ್ಥಿತಿ

B.ಬಲದ ನೇರದಲ್ಲಿ ಸ್ಥಾನ ಪಲ್ಲಟ

C.ಬಲದ ವರ್ತನೆಯಲ್ಲೂ ಕಾಯದ ವಿಶ್ರಾಂತಿ

D.ಪರಸ್ಪರ ಸಮ ಹಾಗೂ ವಿರುದ್ಧವಾದ ಎರಡು ಬಲಗಳ ನಡುವಣ ಕಾಯ

15. **ದ್ರವ ವಸ್ತುಗಳು ತಮ್ಮ ಆಕಾರವನ್ನು ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿವೆ.** ಈ ಹೇಳಿಕೆ ಪ್ರಬಲ ಕಾರಣ___

A .ದ್ರವದ ಅಣುಗಳ ನಡುವೆ ಪ್ರಬಲ ಆಕರ್ಷಣಾ ಬಲವಿದೆ


B.ದ್ರವದ ಅಣುಗಳ ನಡುವೆ ಅತಿ ದುರ್ಬಲ ಆಕರ್ಷಣಾ ಬಲವಿದೆ

C.ದ್ರವಗಳಿಗೆ ನಿರ್ದಿಷ್ಟ ಆಕಾರವಿಲ್ಲ

D.ದ್ರವಗಳಿಗೆ ನಿರ್ದಿಷ್ಟ ಆಕಾರವಿದೆ.

e-BRC SKP

16. ಈ ಚಿತ್ರವು ಯಾವ ಶಕ್ತಿಯ ಯಾವ ವಿಧವನ್ನು ಪ್ರತಿನಿಧಿಸುತ್ತದೆ.



A.ಚಲನಶಕ್ತಿ

B.ವಿಭವಶಕ್ತಿ

C.ಪ್ರಚ್ಛನ್ನಶಕ್ತಿ

D..ಸೌರಶಕ್ತಿ

17. ಹೈಡ್ರೋಕ್ಲೋರಿಕ್ ಆಮ್ಲವನ್ನು ಇದರಲ್ಲಿ ಬಳಸಲಾಗುತ್ತದೆ. ________________________

A ಚಿನ್ನದಂತಹ ಬೆಲೆಬಾಳುವ ಲೋಹಗಳ ಶುದ್ಧೀಕರಣ

B.ಪೆಟ್ರೋಲ್‌ನ ಸಂಸ್ಕರಣೆ

C.ಸಾಮಾನ್ಯ ಲವಣದ ಶುದ್ಧೀಕರಣ

D.ಪಾನೀಯಗಳ ತಯಾರಿಕೆ

18. ಇಲೆಕ್ಟ್ರಾನ್ ಎಂದು ಹೆಸರಿಸಿದ ವಿಜ್ಞಾನಿ ________________

A ಜೆ.ಜೆ. ಥಾಮ್ಸನ್

B.ಜಾನ್ ಡಾಲ್ಟನ್

C.ಕಣಾದ

D.ಜೇಮ್ಸ ಚಾಡ್‌ವಿಕ್

19.ಘರ್ಷಣೆಯ ಇಳಿಕೆ ಕ್ರಮದಲ್ಲಿ ಸರಿಯಾದ ಜೋಡಣೆ _____________________

A ಉರುಳು ಘರ್ಷಣೆ, ಸ್ಥಾಯಿ ಘರ್ಷಣೆ, ಜಾರು ಘರ್ಷಣೆ.

B.ಉರುಳು ಘರ್ಷಣೆ, ಜಾರು ಘರ್ಷಣೆ, ಸ್ಥಾಯಿ ಘರ್ಷಣೆ.

C.ಜಾರು ಘರ್ಷಣೆ, ಸ್ಥಾಯಿ ಘರ್ಷಣೆ, ಉರುಳು ಘರ್ಷಣೆ.

D.ಸ್ಥಾಯಿ ಘರ್ಷಣೆ, ಜಾರು ಘರ್ಷಣೆ, ಉರುಳು ಘರ್ಷಣೆ.

20. 20 N ಬಲ ಪ್ರಯೋಗದಿಂದ ಒಂದು ಮೇಜನ್ನು 8.5 m ದೂರದವರೆಗೆ ತಳ್ಳಿದರೆ, ನಡೆದ ಕೆಲಸದ ಪ್ರಮಾಣವನ್ನು ಲೆಕ್ಕ ಹಾಕಿ.

A.170 ಜೌಲ್

B.28.5 ಜೌಲ್

e-BRC SKP

C.200 ಜೌಲ್

D.85 ಜೌಲ್

21.ಪ್ರತ್ಯಾಮ್ಲಗಳ ಭೌತಿಕ ಗುಣಗಳ ಪಟ್ಟಿಯನ್ನು ಆಯ್ಕೆ ಮಾಡಿ.

A **ಪಟ್ಟಿ** –1

1. **ರುಚಿ** : ಪ್ರತ್ಯಾಮ್ಲಗಳು ಕಹಿ ರುಚಿಯನ್ನು ಹೊಂದಿರುತ್ತವೆ.
2. **ಸ್ಪರ್ಶ** : ಪ್ರತ್ಯಾಮ್ಲಗಳನ್ನು ಮುಟ್ಟಿದಾಗ ಸೋಪಿನಂತೆ ಭಾಸವಾಗುತ್ತದೆ.
3. **ವಾಹಕತ್ವ** : ಪ್ರತ್ಯಾಮ್ಲಗಳ ದ್ರಾವಣಗಳು ಉತ್ತಮ ವಿದ್ಯುತ್‌ವಾಹಕಗಳಾಗಿವೆ.
4. **ಸಂಕ್ಷಾರಕತ್ವ** : ಕೆಲವು ಪ್ರತ್ಯಾಮ್ಲಗಳು ಸಂಕ್ಷಾರಕಗಳಾಗಿವೆ.

B.**ಪಟ್ಟಿ** –2

1. **ರುಚಿ** : ಪ್ರತ್ಯಾಮ್ಲಗಳು ಹುಳಿ ರುಚಿಯನ್ನು ಹೊಂದಿರುತ್ತವೆ.
2. **ಸ್ಪರ್ಶ** : ಪ್ರತ್ಯಾಮ್ಲಗಳನ್ನು ಮುಟ್ಟಿದಾಗ ಸೋಪಿನಂತೆ ಭಾಸವಾಗುತ್ತದೆ.
3. **ವಾಹಕತ್ವ** : ಪ್ರತ್ಯಾಮ್ಲಗಳ ದ್ರಾವಣಗಳು ಉತ್ತಮ ವಿದ್ಯುತ್‌ವಾಹಕಗಳಾಗಿವೆ.
4. **ಸಂಕ್ಷಾರಕತ್ವ** : ಕೆಲವು ಪ್ರತ್ಯಾಮ್ಲಗಳು ಸಂಕ್ಷಾರಕಗಳಾಗಿವೆ.

C.**ಪಟ್ಟಿ** –3

1. **ರುಚಿ** : ಪ್ರತ್ಯಾಮ್ಲಗಳು ಕಹಿ ರುಚಿಯನ್ನು ಹೊಂದಿರುತ್ತವೆ.
2. **ಸ್ಪರ್ಶ** : ಪ್ರತ್ಯಾಮ್ಲಗಳನ್ನು ಮುಟ್ಟಿದಾಗ ಸೋಪಿನಂತೆ ಭಾಸವಾಗುತ್ತದೆ.
3. **ವಾಹಕತ್ವ** : ಪ್ರತ್ಯಾಮ್ಲಗಳ ದ್ರಾವಣಗಳು ಉತ್ತಮ ವಿದ್ಯುತ್‌ಅವಾಹಕಗಳಾಗಿವೆ.
4. **ಸಂಕ್ಷಾರಕತ್ವ** : ಕೆಲವು ಪ್ರತ್ಯಾಮ್ಲಗಳು ಸಂಕ್ಷಾರಕಗಳಾಗಿವೆ.

D .**ಪಟ್ಟಿ** –4

1. **ರುಚಿ** : ಪ್ರತ್ಯಾಮ್ಲಗಳು ಹುಳಿ ರುಚಿಯನ್ನು ಹೊಂದಿರುತ್ತವೆ.
2. **ಸ್ಪರ್ಶ** : ಪ್ರತ್ಯಾಮ್ಲಗಳನ್ನು ಮುಟ್ಟಿದಾಗ ಹರಳಿನಂತೆ ಭಾಸವಾಗುತ್ತದೆ.
3. **ವಾಹಕತ್ವ** : ಪ್ರತ್ಯಾಮ್ಲಗಳ ದ್ರಾವಣಗಳು ಉತ್ತಮ ವಿದ್ಯುತ್ ವಾಹಕಗಳಾಗಿವೆ.
4. **ಸಂಕ್ಷಾರಕತ್ವ** : ಕೆಲವು ಪ್ರತ್ಯಾಮ್ಲಗಳು ಸಂಕ್ಷಾರಕಗಳಾಗಿವೆ.

22.. ಕೆಳಗಿನ ಸಂದರ್ಭಗಳಲ್ಲಿ ಏನಾಗುತ್ತದೆ ಎಂದು ತಿಳಿಸಿ

**ಯಾವಾಗಲೂ ಗಡುಸು ನೀರಿನಿಂದ ಪಾತ್ರೆಗಳನ್ನು ತೊಳೆದಾಗ**

A.ಪಾತ್ರೆಗಳನ್ನು ಗಡುಸು ನೀರಿನಿಂದ ತೊಳೆದಾಗ, ಕಾಂತಿಯನ್ನು ಕಳೆದುಕೊಳ್ಳುತ್ತವೆ. ಈ .ಪಾತ್ರೆಗಳು ಕಾಂತಿಹೀನ ಹಾಗೂ ಕೊಳಕಾಗಿ ಕಾಣುತ್ತವೆ.

B.ಪಾತ್ರೆಗಳನ್ನು ಗಡುಸು ನೀರಿನಿಂದ ತೊಳೆದಾಗ, ಕಾಂತಿಯನ್ನು ಪಡೆದುಕೊಳ್ಳುತ್ತವೆ. ಈ ಪಾತ್ರೆಗಳು ಕಾಂತಿಯುತವಾಗಿ ಹಾಗೂ ನಯವಾಗಿ ಕಾಣುತ್ತವೆ.


C.ಪಾತ್ರೆಗಳನ್ನು ಗಡುಸು ನೀರಿನಿಂದ ತೊಳೆದಾಗ, ಕಾಂತಿಯನ್ನು ಪಡೆದುಕೊಳ್ಳುತ್ತವೆ. ಈ

e-BRC SKP

ಪಾತ್ರೆಗಳು ಕಾಂತಿಹೀನ ಹಾಗೂ ಕೊಳಕಾಗಿ ಕಾಣುತ್ತವೆ.

D.ಪಾತ್ರೆಗಳನ್ನು ಗಡುಸು ನೀರಿನಿಂದ ತೊಳೆದಾಗ, ಕಾಂತಿಯನ್ನು ಕಳೆದುಕೊಳ್ಳುತ್ತವೆ. ಈ ಪಾತ್ರೆಗಳು ಕಾಂತಿಯುತ ಹಾಗೂ ಸ್ವಚ್ಛವಾಗಿ ಕಾಣುತ್ತವೆ.

23. ಈ ಚಿತ್ರದ ಭಾಗಗಳನ್ನು ಕ್ರಮವನ್ನು ಆಧರಿಸಿ ಗುರುತಿಸಿ ಆಯ್ಕೆ ಮಾಡಿ.




A.ಪಾದರಸ ಬುರುಡೆ, ವಕ್ರತೆ, ಅಳತೆಪಟ್ಟಿ ,ಗಾಜಿನ ಬುರುಡೆ

B.ಪಾದರಸ ಬುರುಡೆ, ವಕ್ರತೆ, ಅಳತೆಪಟ್ಟಿ, ಗಾಜಿನ ಬುರುಡೆ

C,ಗಾಜಿನ ಬುರುಡೆ, ,ಅಳತೆಪಟ್ಟಿ .ಪಾದರಸ ಬುರುಡೆ, ವಕ್ರತೆ

D.ಪಾದರಸ ಬುರುಡೆ, ,ಗಾಜಿನ ಬುರುಡೆ, ವಕ್ರತೆ, ಅಳತೆಪಟ್ಟಿ

24. ಈ ಪ್ರಯೋಗದ ಚಿತ್ರವು ಘನ ವಸ್ತುಗಳು ಯಾವ ಗುಣವನ್ನು ಪ್ರತಿನಿಧಿಸುತ್ತದೆ.



A.ಘನ ವಸ್ತುಗಳು ಭಾರವಾಗಿದ್ದು ಮತ್ತು ಬಳೆಯೊಳಗೆ ನುಸುಳುತ್ತವೆ

B.ಘನ ವಸ್ತುಗಳು ಹಗುರವಾಗಿದ್ದು ಮತ್ತು ಬಳೆಯೊಳಗೆ ನುಸುಳುತ್ತವೆ

C.ಘನ ವಸ್ತುಗಳು ಶಾಖ ನೀಡಿದಾಗ ವಿಕಸನ ಹೊಂದುತ್ತವೆ.

D.ಘನ ವಸ್ತುಗಳು ಶಾಖ ನೀಡಿದಾಗ ಬಳೆಯೊಳಗೆ ನುಸುಳುತ್ತವೆ

BRC SKP

## ಸಮಾಜ ವಿಜ್ಞಾನ

==========================================================

1.ಗಜವೇಂಟೆಗಾರ ಎಂಬ ಬಿರುದು ಹೊಂದಿದ್ದ ಅರಸ___________________

A.ರಾಮರಾಯ

B.ಶ್ರೀ ಕೃಷ್ಣ ದೇವರಾಯ

C.ಅಚ್ಯುತ ರಾಯ

D.ಎರಡನೇ ದೇವರಾಯ

2. ಗಂಗಾದೇವಿಯು ಬರೆದ ಕೃತಿ _____________

A.ಮಧುರಾ ವಿಜಯಂ

B.ವೇದಾರ್ಥ ಪ್ರಕಾಶ

C.ಜಾಂಬವತಿ ಕಲ್ಯಾಣ

D.ಸುಧಾನಿಧಿ

3.ಭಾರತದ ಅತಿ ದೊಡ್ಡ ಗೋಳಗುಮ್ಮಟವಿರುವ ಸ್ಥಳ_________

A.ವಿಜಯಪುರ

B.ಬೀದರ್

C.ದೆಹಲಿ

D.ಅಹಮದ್‌ನಗರ

4.ವಿಜಯಪುರದ ಆದಿಲ್ ಷಾಹಿ ಮನೆತನದ ಸ್ಥಾಪಕ_____________

A.ಯುಸೂಫ್ ಆದಿಲ್ ಖಾನ್

B.ಸಿಕಂದರ್ ಆದಿಲ್ ಷಾ

C.ಮಹಮದ್ ಆದಿಲ್ ಷಾ

D.ಇಸ್ಮಾಯಿಲ್ ಆದಿಲ್ ಖಾನ್

5.ತಾನು ದೇವರ ಪ್ರತಿನಿಧಿ ಎಂದು ಹೇಳಿಕೊಂಡ ದಿಲ್ಲಿಯ ಸುಲ್ತಾನ_____________

A.ಬಲ್ಬನ್

B.ಕುತ್ಬುದಿನ್ ಐಬಕ್

C.ಅಲ್ಲಾವುದ್ದೀನ್ ಖಿಲ್ಜಿ

D.ಮಹಮದ್ ಬಿನ್ ತುಘಲಕ್

e-BRC SKP

6.ಮೊದಲ ತರೈನ್ ಯುದ್ದದಲ್ಲಿ ಪೃಥ್ವಿರಾಜ ಚೌಹಾಣ್ ನಿಂದ ಸೋತ ದೊರೆ ___________

A.ಮಹಮದ್ ಘೋರಿ

B.ಕುತ್ಬುದಿನ್ ಐಬಕ್

C.ಮಹಮದ್ ಘಜನಿ

D.ಮಲ್ಲಿಕಾಫರ್

7.ಚೈತನ್ಯರ ಮೊದಲ ಹೆಸರು_________

A.ತಿಮ್ಮಪ್ಪ

B.ಶ್ರೀನಿವಾಸ

C.ವಿಶ್ವಂಬರ

D.ರಾಮಾನಂದ

8.ಶಿವಪ್ಪನಾಯಕನ ಸಿಸ್ತು ಎಂದರೆ________________

A.ವ್ಯಾಪಾರ ಪದ್ದತಿ

B.ಸೈನ್ಯ ವ್ಯವಸ್ಥೆ

C.ಮಂತ್ರಿಮಂಡಲ

D.ಕಂದಾಯ ವ್ಯವಸ್ಥೆ

9.ಸುರಪುರದ ರಾಜಧಾನಿಯನ್ನು ನಿರ್ಮಿಸಿದ ಅರಸ____________

A.ಗಡ್ಡಿ ಪಿಡ್ಡನಾಯಕ

B.ಪೀತಾಂಬರಿ ಬಹರಿ ಪಿಡ್ಡನಾಯಕ

C.ವೆಂಕಟಪ್ಪನಾಯಕ

D.ನಾಲ್ವಡಿ ವೆಂಕಟಪ್ಪನಾಯಕ

10.ಭಾರತರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ_______________

A.ಸರ್ ಮಿರ್ಜಾ ಇಸ್ಮಾಯಿಲ್

B.ಕುವೆಂಪು

C.ಭೀಮಸೇನ್ ಜೋಶಿ

D.ಸರ್ ಎಮ್ ವಿಶ್ವೇಶ್ವರಯ್ಯ

e-BRC SKP

11.ಫಾರ್ವರ್ಡ್ ಬ್ಲಾಕ್ ಆರಂಭಿಸಿದವರು_______________

A.ಜವಹರ್ ಲಾಲ್ ನೆಹರೂ

B.ಬಿ.ಆರ್ ಅಂಬೇಡ್ಕರ್

C.ಸುಭಾಷ್ ಚಂದ್ರ ಭೋಸ್

D.ಮಹಾತ್ಮ ಗಾಂಧೀಜಿ

12.ಭೂ ಕಂದಾಯ ಪದ್ಧತಿಯನ್ನು ರೂಪಿಸಿದ ಅಕ್ಬರ್ ನ ಮಂತ್ರಿ_____________________

A. ಅಬ್ದುಲ್ ಫಜಲ್

B. ಬದೌನಿ

C. ತೋದರಮಲ್ಲ

D. ಬೀರಬಲ್ಲ

13.ಶಿವಾಜಿಯ ಪಟ್ಟಾಭಿಷೇಕ ನಡೆದ ಸ್ಥಳ____________________

A.ರಾಯಗಢ

B.ಪುಣೆ

C.ಸಿಂಹಾಗಢ

D.ಪ್ರತಾಪಗಢ

14. ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದವರು____________________

A.ರಾಬರ್ಟ್ ಕ್ಲೈವ್

B.ವಾಸ್ಕೋಡಗಾಮ

C.ಫ್ರಾನ್ಸಿಸ್ ಡಿ ಆಲ್ಮೇಡಾ

D.ಆಲ್ಬುಕರ್ಕ

15.ಭಾರತಕ್ಕೆ ವ್ಯಾಪಾರಕ್ಕಾಗಿ ಸಮುದ್ರಮಾರ್ಗವಾಗಿ ಮೊದಲಿಗೆ ಬಂದಿದ್ದ ಯುರೋಪಿಯನ್ನರು________________

A.ಡಚ್ಚರು

B.ಬ್ರಿಟಿಷರು

C.ಫ್ರೆಂಚರು

D.ಪೋರ್ಚುಗೀಸರು

e-BRC SKP

16.ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು_______________

A.ಲಾರ್ಡ್ ವೆಲ್ಲಸ್ಲಿ

B.ಲಾರ್ಡ್ ಡಾಲಹೌಸಿ

C.ಸರ್ ಐರ್ ಕೂಟ್

D..ಕೌಂಟ್ ಡಿ ಲ್ಯಾಲಿ

17.ಪ್ಲಾಸಿ ಕದನದ ನಂತರ ಬಂಗಾಳದ ನವಾಬನಾದನು_______________

A.ಜಾಫರ್ ಜಂಗ್

B.ಚಂದಾ ಸಾಹೇಬ್

C..ಸಲಾಬತ್ತ್ ಜಂಗ್

D.ಮೀರ್ ಜಾಫರ್

18.ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು________________________

A.ವಾರನ್ ಹೇಸ್ಟಿಂಗ್

B.ಕಾರ್ನ ವಾಲೀಸ್

C.ಥಾಮಸ್ ಮನ್ರೋ

D.ವಿಲಿಯಂ ಬೆಂಟಿಕ್

19.ದಿಲ್ಲಿ ಸುಲ್ತಾನರ ಮನೆತನಗಳನ್ನು ಕ್ರಮವಾಗಿ ಬರೆದಾಗ __________________

A.ಗುಲಾಮಿ ಸಂತತಿ ,ಖಿಲ್ಜಿ ಸಂತತಿ,ತುಘಲಕ್ ಸಂತತಿ,ಸೈಯದ್ ಸಂತತಿ,ಲೂಧಿ ಸಂತತಿ

B. ಖಿಲ್ಜಿ ಸಂತತಿ,ತುಘಲಕ್ ಸಂತತಿ,ಸೈಯದ್ ಸಂತತಿ,ಲೂಧಿ ಸಂತತಿ, ಗುಲಾಮಿ ಸಂತತಿ

C. ತುಘಲಕ್ ಸಂತತಿ,ಸೈಯದ್ ಸಂತತಿ,ಲೂಧಿ ಸಂತತಿ, ಗುಲಾಮಿ ಸಂತತಿ ,ಖಿಲ್ಜಿ ಸಂತತಿ

D. ,ಸೈಯದ್ ಸಂತತಿ,ಲೂಧಿ ಸಂತತಿ, ಗುಲಾಮಿ ಸಂತತಿ ,ಖಿಲ್ಜಿ ಸಂತತಿ,ತುಘಲಕ್ ಸಂತತಿ

20.ಪ್ಲಾಸಿ ಕದನಕ್ಕೆ ಪರಿಣಾಮಗಳ ಗುಂಪನ್ನು ಆಯ್ಕೆ ಮಾಡಿ_______________________

A.ಮೀರ್ ಜಾಫರ್ ಬಂಗಾಳದ ನವಾಬನಾದನು,ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ 24 ಪರಗಣಗಳು ದೊರೆತವು

B.ಮೀರ್ ಖಾಸಿಂ ಬಂಗಾಳದ ನವಾಬನಾದನು,ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ 24 ಪರಗಣಗಳು ದೊರೆತವು

C.ಮೀರ್ ಖಾಸಿಂ ಬಂಗಾಳದ ನವಾಬನಾದನು,ಮುಂದೆ ಬಕ್ಸಾರ್ ಕದನಕ್ಕೆ ಕಾರಣವಾಯಿತು.

D.ಮೀರ್ ಜಾಫರ್ ಬಂಗಾಳದ ನವಾಬನಾದನು,ಮುಂದೆ ಕರ್ನಾಟಿಕ್ ಯುದ್ಧಕ್ಕೆ ಕಾರಣವಾಯಿತು.

e-BRC SKP

21.ಸೈಮನ್ ನಿಯೋಗವನ್ನು ಭಾರತೀಯರು ಬಹಿಷ್ಕರಿಸಲು ಕಾರಣ ______________________


A.ನಿಯೋಗದಲ್ಲಿ ಬಹುಪಾಲು ಬ್ರಿಟಿಷರಿದ್ದು ,ಕಡಿಮೆ ಪ್ರಮಾಣದಲ್ಲಿ ಭಾರತೀಯರಿದ್ದಿದ್ದು.

B.ನಿಯೋಗದಲ್ಲಿ ಗಾಂಧೀಜಿಯವರಿಗೆ ಪ್ರಾಧನ್ಯತೆ ನೀಡಲಿಲ್ಲ.

C.ನಿಯೋಗದಲ್ಲಿದ್ದವರೆಲ್ಲಾ ಭಾರತೀಯರಾಗಿದ್ದರು,ಬ್ರಿಟಿಷರಿಗೆ ಪ್ರಾಧನ್ಯತೆ ಇರಲಿಲ್ಲ.

D.ನಿಯೋಗದಲ್ಲಿದ್ದವರೆಲ್ಲಾ ಬ್ರಿಟಿಷರಾಗಿದ್ದರು,ಭಾರತೀಯರಿಗೆ ಪ್ರಾಧನ್ಯತೆ ಇರಲಿಲ್ಲ.

22. ಈ ಸ್ಥಳಗಳಲ್ಲಿ ಸ್ಥಾಪನೆಯಾದ ಸಾಮಾಜಿಕ ಮತ್ತು ಧಾರ್ಮಿಕ ಚಳುವಳಿಯ ಕೇಂದ್ರಗಳು ಕ್ರಮ ಸಂಖ್ಯೆಗನುಗುಣವಾಗಿ ______________________




A. ರಾಮಕೃಷ್ಣ ಮಿಷನ್, ಸತ್ಯ ಶೋಧಕ ಸಮಾಜ, .ಪ್ರಾರ್ಥನಾ ಸಮಾಜ,ಥಿಯೋ ಸೋಫಿಕಲ್ ಸೋಸೈಟಿ

B. ಥಿಯೋ ಸೋಫಿಕಲ್ ಸೋಸೈಟಿ, ರಾಮಕೃಷ್ಣ ಮಿಷನ್, ಸತ್ಯ ಶೋಧಕ ಸಮಾಜ, .ಪ್ರಾರ್ಥನಾ ಸಮಾಜ

C.ಪ್ರಾರ್ಥನಾ ಸಮಾಜ,ಥಿಯೋ ಸೋಫಿಕಲ್ ಸೋಸೈಟಿ, ರಾಮಕೃಷ್ಣ ಮಿಷನ್, ಸತ್ಯ ಶೋಧಕ ಸಮಾಜ

Dಸತ್ಯ ಶೋಧಕ ಸಮಾಜ,ಪ್ರಾರ್ಥನಾ ಸಮಾಜ,ಥಿಯೋ ಸೋಫಿಕಲ್ ಸೋಸೈಟಿ, ರಾಮಕೃಷ್ಣ ಮಿಷನ್

23.ಪ್ರಖ್ಯಾತ ಹಂಪಿಯಲ್ಲಿ ಕಂಡುಬರುವ ಮುಖ್ಯ ಪ್ರೇಕ್ಷಣಿಯ ಸ್ಥಳಗಳು______________________

A.ಉಗ್ರ ನರಸಿಂಹ,ಸಾಸಿವೆಕಾಳು ಗಣೇಶ,ವಿದ್ಯಾಶಂಕರ ದೇವಾಲಯ,ವಿಜಯ ವಿಠಲ ದೇವಾಲಯ

B.ಸಾಸಿವೆ ಕಾಳು ಗಣೇಶ,ಕಲ್ಲಿನ ರಥ,ಉಗ್ರ ನರಸಿಂಹ, ಹಜಾರ ರಾಮಸ್ವಾಮಿ ದೇವಾಲಯ

C.ಸಾಸಿವೆ ಕಾಳು ಗಣೇಶ,ಕಲ್ಲಿನ ರಥ, ವಿದ್ಯಾಶಂಕರ ದೇವಾಲಯ,ವಿಜಯ ವಿಠಲ ದೇವಾಲಯ

D. ಗೋಲ್ ಗುಂಬಜ್,ಸಾಸಿವೆಕಾಳು ಗಣೇಶ,ವಿದ್ಯಾಶಂಕರ ದೇವಾಲಯ,ಚನ್ನಕೇಶವ ದೇವಾಲಯ

e-BHUSKP

24.ಈ ಕೆಳಗಿನ ಜೋಡಿಗಳಲ್ಲಿ ಸರಿಯಾದ ಆಯ್ಕೆ ________________________

A .ಜಾಂಬವತಿ ಕಲ್ಯಾಣ – ರತ್ನಾಕರ ವರ್ಣಿ
ಭರತೇಶ ವೈಭವ – ಚಾಮರಸ
ಶಿವತತ್ವ ಚಿಂತಾಮಣಿ – ಶ್ರೀ ಕೃಷ್ಣ ದೇವರಾಯ
ಪ್ರಭುಲಿಂಗ ಲೀಲೆ – ಲಕ್ಕಣ್ಣ ದಂಡೇಶ

B. ಜಾಂಬವತಿ ಕಲ್ಯಾಣ – ಶ್ರೀ ಕೃಷ್ಣ ದೇವರಾಯ
ಭರತೇಶ ವೈಭವ – ರತ್ನಾಕರ ವರ್ಣಿ
ಶಿವತತ್ವ ಚಿಂತಾಮಣಿ – ಲಕ್ಕಣ್ಣ ದಂಡೇಶ
ಪ್ರಭುಲಿಂಗ ಲೀಲೆ – ಚಾಮರಸ

C. ಜಾಂಬವತಿ ಕಲ್ಯಾಣ – ಲಕ್ಕಣ್ಣ ದಂಡೇಶ
ಭರತೇಶ ವೈಭವ – ಚಾಮರಸ
ಶಿವತತ್ವ ಚಿಂತಾಮಣಿ – ಶ್ರೀ ಕೃಷ್ಣ ದೇವರಾಯ
ಪ್ರಭುಲಿಂಗ ಲೀಲೆ – ರತ್ನಾಕರ ವರ್ಣಿ

D. ಜಾಂಬವತಿ ಕಲ್ಯಾಣ – ಚಾಮರಸ
ಭರತೇಶ ವೈಭವ – ಶ್ರೀ ಕೃಷ್ಣ ದೇವರಾಯ
ಶಿವತತ್ವ ಚಿಂತಾಮಣಿ – ಲಕ್ಕಣ್ಣ ದಂಡೇಶ
ಪ್ರಭುಲಿಂಗ ಲೀಲೆ – ರತ್ನಾಕರ ವರ್ಣಿ

e-BRC SKP

# ಧನ್ಯವಾದಗಳು

e-BRCSKP